ಉಳಿಯುತ್ತಿರಲಿಲ್ಲ.

'exactly ಮಿಸ್ಟರ್ ಗುನ್ನಾಲಾಲ್, ಜಗತ್ತಿನ ಅನೇಕ ಅಧ್ಯಯನಗಳು ಕನಸುಗಳ ಬಗ್ಗೆ ಕೆಲವು ಅಂಶಗಳನ್ನು ಹೊರಹಾಕಿವೆ. ಪ್ರತಿಯೊಬ್ಬ ಮನುಷ್ಯ ತನ್ನ ಜೀವಿತಾವಧಿಯಲ್ಲಿ ಸುಮಾರು ಒಂದು ಲಕ್ಷ ಕನಸುಗಳನ್ನು ಕಾಣುತ್ತಾನಂತೆ. ಕೆಲವು ಕನಸುಗಳು ಖುಷಿಯನ್ನು ಕೊಟ್ಟರೆ, ಕೆಲವು ಕನಸುಗಳು ತೀವ್ರ ಬೇಸರವನ್ನುಂಟುಮಾಡುತ್ತವೆ. ಹಾಗಂತ ಅಂಥ ಕನಸುಗಳು ಒಳ್ಳೆಯ ಫಲಗಳನ್ನಾಗಲೀ, ಕೆಟ್ಟ ಫಲಗಳನ್ನಾಗಲೀ ನೀಡುತ್ತವೆಂದು ಅರ್ಥವಲ್ಲ. ಕೆಟ್ಟ ಕನಸುಗಳು ಕೆಲವೊಮ್ಮೆ ಒಳ್ಳೆಯ ಫಲಗಳನ್ನು, ಒಳ್ಳೆಯ ಕನಸುಗಳು ಕೆಟ್ಟ ಫಲಗಳನ್ನೂ ನೀಡಿದ ಉದಾಹರಣೆಗಳೂ ಇವೆ. ನೋಡಿ, ನಿಮಗೆ ಚಿಕ್ಕಂದಿನಲ್ಲಿ ಪದೇ ಪದೇ ರೈಲಿನ ಕನಸು ಬೀಳುತ್ತಿತ್ತೆಂದು ಹೇಳಿದಿರಲ್ಲ: ಅದು ನೀವು ಮುಂದೆ ರೈಲಿನಲ್ಲಿ ಮುಂಬಯಿಗೆ ಪ್ರಯಾಣಿಸುವ ಮುನ್ಸೂಚನೆಯಾಗಿದ್ದರೆ, ರಾಶಿ ರಾಶಿ ಚಿಲ್ಲರೆ ಕಾಸುಗಳು ಕಂಡ ಕನಸು ನೀವು ಮುಂದೆ ದೊಡ್ಡ ಶ್ರೀಮಂತರಾಗುವ ಮುನ್ಸೂಚನೆ ನೀಡಿತ್ತೆಂದು ಅನಲೈಸ್ ಮಾಡಬಹುದು. ಆದರೆ ಕನಸಿನ ಒಂದು ವಿಚಿತ್ರ ಲಕ್ಷಣ ಎಂದರೆ ತನ್ನ ಮುಂದಿನ ಪರಿಣಾಮಗಳ ಒಂದೇ ಒಂದು ಸಾಸಿವೆ ಕಾಳಿನಷ್ಟು ಕನಸು ಕಂಡವರಿಗೆ ಬಿಟ್ಟು ಕೊಡದಿರುವುದು. ಇದಲ್ಲವನ್ನೂ ಪರಿಗಣಿಸಿ ಹೇಳುವುದಾದರೆ ಮುಂದೆ ನಿಮ್ಮ ಮೊಮ್ಮಗನ ವೈವಾಹಿಕ ಜೀವನದಲ್ಲಿ ಒಳ್ಳೆಯದೂ ಆಗಬಹುದು ಅಥವಾ ಬೇಸರವಾಗುವಂತಹ ಸಂಗತಿಗಳೂ ನಡೆಯಬಹುದು. ಮತ್ತು ಅಂಥ ಸಂದರ್ಭಗಳಲ್ಲಿ ನಿಮ್ಮ ಮೊಮ್ಮಗನೊಂದಿಗೂ ನೀವೂ ಕೂಡ ಖುಷಿ ಸಂಕಷ್ಟಗಳಲ್ಲಿ ಭಾಗಿಯಾಗಬಹುದು' ಡಾಕ್ಟರ್ ಮನೋರಂಜನಿ ಸುದೀರ್ಘವಾಗಿ ಮಾತನಾಡಿ ಒಂದು ಗ್ಲಾಸ್ ನೀರು ಕುಡಿದಿದ್ದರು. ಆಕೆಯ ಮಾತುಗಳು ಗುನ್ನಾಲಾಲನಿಗೆ ಸಂಪೂರ್ಣವಾಗಿ ಒಪ್ಪಿಗೆಯಾಗಿದ್ದವು.

'ನಿಮ್ಮ ಅನಾಲಿಸಿಸ್ ನನಗೆ ಪೂರ್ತಿಯಾಗಿ ತೃಪ್ತಿಯನ್ನು ನೀಡಿದೆ ಡಾಕ್ಟರ್' ಎಂದು ಹೇಳಿ ಎರಡು ಲಕ್ಷ ರೂಪಾಯಿಯ ಚೆಕ್‌ಗೆ ಸಹಿ ಮಾಡಿ ಮನೋರಂಜನಿಯವರಿಗೆ ಕೊಟ್ಟು ಹೊರಡಲನುವಾದಾಗ ಮನೋರಂಜನಿಯವರು, 'ನಾಳೆ ನನಗೆ ಬೇರೆ ಅಪಾಯಿಂಟ್ಮೆಂಟ್ ಇಲ್ಲ. ಬೇಕಾದರೆ ನಾಳೆ ನಿಮ್ಮ ಮೊಮ್ಮಗನನ್ನು ಕರೆತನ್ನಿ, ಅವನೊಂದಿಗೂ ಒಂದು ಗಂಟೆ ಮಾತನಾಡ್ತೀನಿ. ಬಟ್ ಫಾರ್ ದಟ್ ಯು ನೀಡ್ ನಾಟ್ ಪೇ ಎನಿಥಿಂಗ್' ಎಂದು ನಕ್ಕಿದ್ದರು. ಗುನ್ನಾಲಾಲನಿಗೇಕೊ ತುಂಬಾನೇ ಖುಷಿಯಾಯಿತು.

'ಆಗಲಿ ಡಾಕ್ಟರ್, ಧನ್ಯವಾದಗಳು' ಎಂದು ಹೇಳಿ ಚೇಂಬರ್‌ನಿಂದ ಹೊರನಡೆದ. ಗುನ್ನಾಲಾಲನಿಗೆ ಕಾಯುತ್ತಾ ಪಿಎ ಹರ್ಷವರ್ಧನ್ ಶಿರೋಡ್ಕರ್ ಚೇಂಬರ್‌ನ ಹೊರಗೆ ಸೋಫಾದಲ್ಲಿ ಕುಳಿತಿದ್ದ. ಇಬ್ಬರೂ ಕೂಡಿ ಕಾರು ಹತ್ತಿದ್ದರು.

ಮಾರನೆಯ ದಿನ ಬೆಳಗ್ಗೆ ಹನ್ನೊಂದು ಗಂಟೆಗೆ ಗುನ್ನಾಲಾಲ್ ಮೊಮ್ಮಗ ಆಸ್ಕರ್ ವೈಲ್ಡನ ಜೊತೆ ಡಾಕ್ಟರ್ ಮನೋರಂಜನಿಯವರ ಮುಂದೆ ಕುಳಿತಿದ್ದ. ತಾತ ಮತ್ತು ಮೊಮ್ಮಗನ ನಡುವೆ ಒಳ್ಳೆಯ ಕೆಮಿಸ್ಟ್ರಿ ಇರುವುದು ಮೊದಲ ನೋಟದಲ್ಲೇ ಡಾಕ್ಟರ್ ಮನೋರಂಜನಿಯವರಿಗೆ ಅರ್ಥವಾಗಿತ್ತು.

'ನಿಜಕ್ಕೂ ನಿನಗೆ ಆಸ್ಕರ್ ವೈಲ್ಡ್ ಅನ್ನುವ ಹೆಸರು ತುಂಬಾ ಚನ್ನಾಗಿ ಒಪ್ಪುತ್ತದೆ' ನಗುತ್ತಾ ಹೇಳಿದ್ದರು ಡಾಕ್ಟರ್ ಮನೋರಂಜನಿ.

'ನಿಮ್ಮ ಹೆಸರು ಕೂಡ ತುಂಬಾ ಚಂದ ಇದೆ. ನಿಮ್ಮ ಹೆಸರಿಗೆ ಅರ್ಥವೇನಾದರೂ ಇದೆಯಾ?' ಕೇಳಿದ್ದ ಆಸ್ಕರ್ ವೈಲ್ಡ್.

'ಇದುವರೆಗೂ ನನ್ನ ಕ್ಲಯಂಟ್ಸ್ ಯಾರೂ ಈ ಬಗ್ಗೆ ಕೇಳಿರಲಿಲ್ಲ. ಗುಡ್, ಮನೋರಂಜನಿ ಎಂದರೆ ಒಂದು ರಾಗದ ಹೆಸರು. ಮನೋರಂಜನಿ ಎಂಬ ಹೆಸರುಳ್ಳವರು ಭಾವನೆ ಮತ್ತು ಪ್ರೀತಿಯ ಬಗ್ಗೆ ತುಂಬಾ ಕರುಣಾಮಯಿಗಳಾಗಿರುತ್ತಾರೆ. ಇತರರ ಒಳಿತಿಗಾಗಿ ತ್ಯಾಗ ಮಾಡಲು ಸಿದ್ಧರಿರುತ್ತಾರೆ. ಕಷ್ಟದಲ್ಲಿರುವ ಜನರಿಗೆ ಮತ್ತು ನಿರ್ಗತಿಕರಿಗೆ ಸಹಾಯ ಮಾಡಲು ಮುಂದಿರುತ್ತಾರೆ. ಒಂದೇ ಪದದಲ್ಲಿ ಹೇಳಬೇಕೆಂದರೆ ಅವರು ಹೆಚ್ಚು ಮಾನವೀಯತೆ ಉಳ್ಳವರೂ, ಪರೋಪಕಾರಿಗಳೂ ಆಗಿರುತ್ತಾರೆ'. ತಮ್ಮ ಹೆಸರಿನ ಬಗ್ಗೆ ಇದ್ದ ಸ್ಪಷ್ಟ ವ್ಯಾಖ್ಯಾನವನ್ನು ಕೊಟ್ಟಿದ್ದರು ಮನೋರಂಜನಿ.

'ಹಾಗಾದರೆ ಕೇವಲ ಶ್ರೀಮಂತರಿಗೆ ಮಾತ್ರ ನೀವು ಕೌನ್ಸಿಲಿಂಗ್ ಮಾಡುತ್ತಾ ಇಂಥ ಐಷಾರಾಮಿ ಬಡಾವಣೆಯಲ್ಲಿ ವಾಸ ಇದೀರಲ್ಲ' ಥಟ್ಟನೆ ಪ್ರಶ್ನಿಸಿದ್ದ ಆಸ್ಕರ್ ವೈಲ್ಡ್.

'ಯಾರಾದರೂ ಇಂಥದ್ದೊಂದು ಪ್ರಶ್ನೆ ಕೇಳಲೆಂದು ಬಹಳ ವರ್ಷಗಳಿಂದಲೂ ಕಾಯುತ್ತಿದ್ದೆ. ನಿನ್ನ ಬ್ರೈನ್ ತುಂಬಾ ಶಾರ್ಪಿದೆ' ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು ಮನೋರಂಜನಿ.

'ಆಂ! ನಾನು ಚಿಕ್ಕವನಿದ್ದಾಗ ನನಗೆ ಮಿಡ್ ಬ್ರೈನ್ ಆ್ಯಕ್ಟಿವೇಶನ್ ಮಾಡಿಸಿದ್ದ ನನ್ನ ತಾತ' ತಾತನ ಕಡೆ ಮೆಚ್ಚುಗೆಯಿಂದ ನೋಡಿ ಹೇಳಿದ್ದ ಆಸ್ಕರ್ ವೈಲ್ಡ್.

'ಓಹೋ, ಮಿಡ್ ಬ್ರೈನ್ ಆ್ಯಕ್ಟಿವೇಶನ್! ಆಲ್ ಜಸ್ಟ್ ಬುಲ್ ಶಿಟ್. ನಿನಗೆ ಬ್ರೈನ್ ಮತ್ತು ಮನಸ್ಸಿನ ಬಗ್ಗೆ ಸ್ವಲ್ಪ ವಿವರವಾಗಿ ಹೇಳ್ತೀನಿ ಕೇಳು. ಮನಸ್ಸು ನಿಯಂತ್ರಣಕ್ಕೆ ನಿಲುಕದ ಒಂದು ಅಗೋಚರ ಸಂಗತಿ. ಅಂಥ ಮನಸ್ಸು ಅಡಗಿಕೊಂಡಿರುವುದು ಬ್ರೈನಿನಲ್ಲಿ. ಮನುಷ್ಯನ ಬಹುಪಾಲು ಮೆದುಳು ಸುಪ್ತಾವಸ್ಥೆಯಲ್ಲೇ ಬಿದ್ದುಕೊಂಡಿರುತ್ತದೆ. ನಮ್ಮ ಕನಸುಗಳು ಟಿಸಿಲೊಡೆಯುವುದು ಈ ಸುಪ್ತಾವಸ್ಥೆಯಲ್ಲಿ ಬಿದ್ದುಕೊಂಡಿರುವ ಮೆದುಳಿನಲ್ಲಿಯೇ. ಹಾಗಾಗಿ ಕನಸುಗಳನ್ನು ನೂರಕ್ಕೆ ನೂರು ಪರ್ಸೆಂಟ್ ಕರಾರುವಾಕ್ಕಾಗಿ ನೆನಪಲ್ಲಿಟ್ಟುಕೊಳ್ಳಲು ಬರುವುದಿಲ್ಲ. ಕೆಲವು ಚಿಂತಕರ ಪ್ರಕಾರ ಮನುಷ್ಯನ ಇಡೀ ದೇಹದಲ್ಲಿ ಮನಸ್ಸು ಹರಡಿಕೊಂಡಿರುವುದರಿಂದಲೇ ಯಾವುದೇ ಭಾಗದಲ್ಲಿ ನೋವಾದರೂ ಅದು ಮೆದುಳಿಗೆ ರವಾನೆಯಾಗುತ್ತದೆ. ಇದನ್ನು ಕೆಲವು ವಿಜ್ಞಾನಿಗಳು ಬಲವಾಗಿ ತಿರಸ್ಕರಿಸುತ್ತಾರೆ. ಮನಸ್ಸು ಮೆದುಳನ್ನು ಬಿಟ್ಟು ಬೇರೆ ಯಾವುದೇ ಭಾಗದಲ್ಲೂ ಆಶ್ರಯ ಪಡೆಯಲು ಸಾಧ್ಯವೇ ಇಲ್ಲವೆಂದು ಅವರು ಪ್ರತಿಪಾದಿಸುತ್ತಾರೆ. ಮಿಡ್ ಬ್ರೈನನ್ನು ಆ್ಯಕ್ಟಿವೇಟ್ ಮಾಡುವ ಸಾಧನವನ್ನು ಕಂಡುಹಿಡಿಯಲು ಮನುಷ್ಯನೇನಾದರೂ ಕಲಿತರೆ ಪ್ರಕೃತಿಯಲ್ಲಿ ಅಡಗಿರುವ ಕೋಟ್ಯಂತರ ವಿಸ್ಮಯಗಳು ಅವನ ಕೈವಶವಾಗಿ ಈ ಪ್ಲಾನೆಟ್ ವಿನಾಶದತ್ತ ಬಹುಬೇಗ ಸಾಗಿಬಿಡುತ್ತದೆ. ಹಾಗಾಗಿ ಮಿಡ್ ಬ್ರೈನ್ ಆ್ಯಕ್ಟಿವೇಶನ್ ಎಂಬುದು ಸುಳ್ಳು. ಆದರೆ ಹೇಳಿದ್ದನ್ನೇ ಹೇಳಿ ಮೆದುಳು ಅದನ್ನು ನಂಬುವಂತೆ ಮಾಡಬಹುದು. ಅದನ್ನೇ ಟ್ಯೂಶನ್ ಎಂತಲೂ ಕರೆಯಬಹುದು. ಹೇಳಿದ್ದನ್ನೇ ಪದೇಪದೇ ಹೇಳುತ್ತಾ ಹೋದಾಗ ಮೆದುಳು ಅದನ್ನು ನಿಧಾನವಾಗಿ ಆ್ಯಕ್ಸೆಪ್ಟ್ ಮಾಡಿಕೊಳ್ಳುತ್ತಾ ಸಾಗುತ್ತದೆ. ಮೆದುಳಿನ ಈ ಗುಣವನ್ನು ಬೇಸ್ ಆಗಿ ಇಟ್ಟುಕೊಂಡೇ ಇವೊತ್ತು ಎಲ್ಲಾ ಕ್ಷೇತ್ರಗಳಲ್ಲೂ ಸೋಷಿಯಲ್ ಫ್ಯಾಬ್ರಿಕೇಷನ್ ಮಿತಿ ಮೀರಿ ವಿಜೃಂಭಿಸುತ್ತಿದೆ' ಡಾಕ್ಟರ್ ಮನೋರಂಜನಿಯ ಮಾತುಗಳನ್ನು ಮಧ್ಯದಲ್ಲೆ ತುಂಡರಿಸಿ–

'ಏನದು ಸೋಷಿಯಲ್ ಫ್ಯಾಬ್ರಿಕೇಷನ್? ನನಗೆ ಹೊಸ ವರ್ಡ್ ಥರ ಕಾಣಿಸ್ತಿದೆ' ಎಂದು ಕೇಳಿದ್ದ ಆಸ್ಕರ್ ವೈಲ್ಡ್. ಮೊಮ್ಮಗನ ಪ್ರಶ್ನೆಯಿಂದ ಗುನ್ನಾಲಾಲ್ ಖುಷಿಗೊಂಡಿದ್ದನಲ್ಲದೆ ತನಗೂ ಆ ಪದ ಹೊಸದಾಗಿ ಕಂಡು ಅದರ ಅರ್ಥವನ್ನು ತಿಳಿದುಕೊಳ್ಳಲು ಉತ್ಸುಕತೆ ತೋರಿದ್ದ.

**'Yes listening is very important thing in learning. You have that passion of listening. That made learning easy for you.** ಸೋಷಿಯಲ್ ಫ್ಯಾಬ್ರಿಕೇಷನ್ ಅನ್ನೋದು ಗ್ಲೋಬಲೈಸೇಷನ್ ಹುಟ್ಟುಹಾಕಿರುವ ಒಂದು ದೊಡ್ಡ ವ್ಯಾಧಿ. ಸುಳ್ಳನ್ನು ಪದೇ ಪದೇ ಹೇಳಿ ಅದನ್ನೇ ಸತ್ಯವನ್ನಾಗಿ ನಂಬಿಸುವುದು. ಮಾರ್ಕೆಟಿಂಗ್‌ನಲ್ಲಿ ಇದನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಫ್ಯಾಬ್ರಿಕೇಷನ್ ಈಜ್ ಜಸ್ಟ್ ಲೈಯಿಂಗ್ ಅಂಡ್ ಚೀಟಿಂಗ್. ದಿ ಹ್ಯೂಮನ್ ಮೈಂಡ್. ಒಂದು ಸಿಂಪಲ್ ಎಕ್ಸಾಂಪಲ್ ಎಂದರೆ ತುಂಬಾ ಹಳೆಯದಾದ ತುಕ್ಕು ಹಿಡಿದ ಕಬ್ಬಿಣದ ಶೀಟಿಗೆ ದಪ್ಪನೆಯ ಅಂದದ ಬಣ್ಣ ಬಳಿದು ಫಳಫಳ ಹೊಳೆಯುವಂತೆ ಮಾಡುವುದು ಮತ್ತು ಅದು ಶ್ರೇಷ್ಠವಾದದ್ದೆಂದು ನಂಬುವಂತೆ ಮಾಡುವುದು. ಇವತ್ತಿನ ಇಡೀ ಜಾಹೀರಾತು ಜಗತ್ತು ಉಸಿರಾಡುತ್ತಿರುವುದು ಇಂಥ ಸೋಷಿಯಲ್ ಫ್ಯಾಬ್ರಿಕೇಷನ್ ಮೇಲೆಯೇ ಎಂಬುದು ಜನಜನಿತವಾಗಿದ್ದರೂ ಜನಕ್ಕೆ ಅದೇ ಹಿತವಾಗಿ ತೋರುತ್ತಿರುವುದಕ್ಕೆ ಇಂತಹ ಸೋಷಿಯಲ್ ಫ್ಯಾಬ್ರಿಕೇಷನ್ ಮನುಷ್ಯನ ಮೆದುಳಿನ ಮೇಲೆ ಒಂದು ರೀತಿಯ ಜಿಡ್ಡಿನ ಲೇಪನವನ್ನು ಬಳಿಯುತ್ತಿರುವುದೇ ಕಾರಣವಾಗಿದೆ...' ಡಾಕ್ಟರ್ ಮನೋರಂಜನಿಯ ಈ ಮಾತುಗಳು ತಾತ, ಮೊಮ್ಮಗ ಇಬ್ಬರಿಗೂ ಕಠಿಣವಾಗಿಯೇ ಕಂಡಿದ್ದವು. ಅಷ್ಟರಲ್ಲಿ ಸಹಾಯಕಿ ಮೂರು ಪ್ಲೇಟುಗಳಲ್ಲಿ ಬಿಸಿಬಿಸಿ ಬಾದಾಮಿ ಹಲ್ವ ತಂದಿಟ್ಟಿದ್ದಳು. ಮೂವರೂ ಮಾತು ಮರೆತು ಹಲ್ವ ತಿಂದಿದ್ದರು.

(ಸಶೇಷ)